(542)

Regd No B G 155 Sri 22-3-1965

ಸತ್ಯವಾದಿ

48 Year
Satyavadi
MYSORE

ಸಂಸ್ಥಾಪಕರು – ಅರಮನೆ ಸಂಸ್ಥೇದಾರ್ ಎಂ ಎ ಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ ೭ ಪೈಸೆ

ಮಹಾತಾ ಗಾಂಧೀಕಿ ಜೈ

ಫ್ರಾಂಕ್‌ಫರ್ಟ್ (ಡಾಡ್)— ಪಶ್ಚಿಮ ಜರ್ಮನಿಯ ಪ್ರಸಿದ್ಧ ನಾಟಕಕಾರರಾದ ಅಟೋಜಾಫರು ಕಳೆದ ವರ್ಷ ಶಾಲವಾಡರು ; ಅವರು ಬರೆದ ಕೊನೆಯ ನಾಟಕ 'ಮಹಾತ್ಮಾ ಗಾಂಧಿ' ಎಂಬುವುದು ; ಗಾಂಧಿಯವರ ಹೆಸರನ್ನು ಅವರು ಭಾರತ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ, ಅವರ ಅಹಿಂಸಾ ಪೂರ್ಣ ಕೊನೆಯಲ್ಲಿ ಹುತಾತ್ಮನೊಬ್ಬನ ಕೈಲಿ ಅವರು ಅಂತ್ಯಗಳನ್ನೊಳಗೊಂಡ ಈ ನಾಟಕವು ಪಶ್ಚಿಮ ಜರ್ಮನಿಯಲ್ಲಿ ಹೆಚ್ಚಿನ ಮೆಚ್ಚುಗೆಯನ್ನು ಗಳಿಸಿದೆ — ಈ ನಾಟಕವು ಗಾಂಧಿಯವರ ಮತ್ತು ಭಾರತದ ಒಳ್ಳೆ ಜರ್ಮನ್ನು ಹೆಚ್ಚಾಗಿ ಅರಿಯುವಂತೆ ಮಾಡಿದೆ. (ಯು ಪಿ ಎಸ್)

ವಿಶ್ವ ಬ್ಯಾಂಕು ಸ್ವಿಡ್ಜರ್ಲೆಂಡು, ಜರ್ಮನಿ, ಸ್ವಿಡ್ಜರ್ಲೆಂಡ್, ಬೆಲ್ಜಿಯಂನಲ್ಲಿ ಸಾಲ ಎತ್ತಲಿದೆ — 70 ಜರ್ಮನ್ನು ಬ್ಯಾಕಿಂಗ ಪೇರ್ ಇದಕ್ಕಾಗಿ 60 ಮಿಲಿಯ ಡಾಲರು ಸಾಲ ಎತ್ತುವುವು.

ಮಾಸ್ಕೊ — ಬಹಿರಾಕಾಶದ ಸರಿ ಶೋಧನೆ ನಡೆಸಿ ರಷ್ಯಾದ ಇಬ್ಬರು ಅಕಾಶಗಾಮಿಗಳು ಸುಖವಾಗಿ ಭೂಮಿಗೆ ಮರಳಿದ್ದಾರೆ.

ಶಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ಯಾಸ್ಥಾಪಕ
ಪಂಪಶ್ಯ ಕೃಷ್ಣಜೋಯಿಸರವರಿಂದ
23 ಮಂಗಳವಾರ ಷಷ್ಠಿ ಅನೂರಾಧ

ಸಂಬಳ ಹೆಚ್ಚಿಸುವುದಕ್ಕೆ ತಿರೋಧ

ವಾಷಿಂಗ್ಟನ್— ಸುಪ್ರೀಂ ಕೋರ್ಟು ಜಡ್ಜಂ ಸಂಬಳ ಹೆಚ್ಚಿಸುವುದನ್ನು ಪ್ರತಿನಿಧಿ ಸಭೆಯು ವಿರೋಧಿಸಿದೆ — ಕಾಂಗ್ರೆಸು ಸದಸ್ಯರು ತಮ್ಮ ಸಂಬಳವನ್ನು ಕಳೆದ ವರ್ಷ ಹೆಚ್ಚಿಸಿಕೊಂಡಾಗ ಸುಪ್ರೀಂ ಕೋರ್ಟು ಜಡ್ಜಂ ಸಂಬಳ 3 ಸಾವಿರ ಡಾಲರು ಹೆಚ್ಚಿಸುವ ಸಲಹೆ ಮಾಡಲಾಗಿದ್ದಿತು.

ನೆಂಬೂದರಿಪಾದರ ಮನವಿ

ನವದೆಹಲಿ— ಕೇರಳದಲ್ಲಿ ಅಧ್ಯಕ್ಷ ಆಳ್ವಿಕೆ ಮುಂದುವರಿಸಕೂಡದೆಂದೂ ಗೌರ್ನರರ ಮತ್ತು ಕೇಂದ್ರ ಮಂತ್ರಿಮಂಡಲದ ಸಲಹೆಯಂತೆ ವರ್ತಿಸಬಾರದೆಂದೂ ಇ ಎಂ ಎಸ್ ನಂಬೂದರಿಪಾದರು ಉಪರಾಷ್ಟ್ರಾಧ್ಯಕ್ಷರಿಗೆ ಮನವಿಪತ್ರವನ್ನು ಮೊನ್ನೆ ಕಳ್ಳಿಸಿದರು — ಡೆಟನೂಗಳ ಬಿಡುಗಡೆಗಾಗಿ ಜಳವಳಿ ನಡೆಸುವುದಾಗಿ ಹೂಡಿ, ಅದು ಸಿವಿಕೆಟಿಂಗು ರೀತಿಯಲ್ಲಿರಬಹುದೆಂದೂ ತಿಳಿಸಿರುವರು.

ಭಾರತದಿಂದ ಪ್ರಕಂಸೆ

ನವದೆಹಲಿ — ಬಹಿರಾಕಾಶದಲ್ಲಿನ ರಷ್ಯದ ಸಾಹಸವನ್ನು ಪ್ರಧಾನಿ ಶಾಸ್ತ್ರಿಗಳು ಪ್ರಶಂಶಿಸಿ ಅಭಿನಂದಿಸಿದರು

ಪಾಕಿಸ್ತಾನದವರಿಂದ ತೀವ್ರ ಗುಂಡಿನ ಹೊಡೆತ

ನವದೆಹಲಿ— ಪಾಕಿಸ್ತಾನಿ ಭಾಗದ ದಹಗ್ರಾಂ ಕಡೆಯಿಂದ ಕಾಚ್‌ಬಿಹಾರ್ ಗಡಿಯ ಕೆಲವು ಕಡೆಗೆ ಮೂರು ದಿನಗ ಪಾಕಿಸ್ತಾನಿ ಸೈನಿಕರಿಂದ ಗುಂಡಿನ ಹೊಡೆತ ಬಿರುಸಾಗಿ ಮತ್ತು ತೀವ್ರವಾಗಿ ನಡೆಯುತ್ತಿದೆಯೆಂದೂ ನಮ್ಮ ಗಡಿ ಪೋಲೀಸರು ಎದುರಿಸಿ ಗುಂಡುಹಾರಿಸುತ್ತಿರುವರೆಂದೂ ತೋಕಸಭೆಯಲ್ಲಿ ತಿಳಿಸಲಾಯಿತು.

ಅಧಿಕರ ಆಳಿಕೆಗೆ ಅನಮ್ಮತಿ

★

ಮುಸ್ಲಿಂ ಲೀಗಿಗೆ ಪಾಕಿಸ್ತಾನದ ಹಣನೇ

ನವದೆಹಲಿ— ಕೇರಳದಲ್ಲಿ ಮುಸ್ಲಿಂ ಲೀಗಿನ ಜನಾನಣಾ ಪ್ರಚಾರಕ್ಕೆ ಪಾಕಿಸ್ತಾನದ ಕೋಟ್ಯಾಧೀಶರೊಬ್ಬರ ಹಣ ಉಪಯೋಗಿಸಲಾಯಿತೆಂಬ ಪತ್ರಿಕಾ ವಂದಿಯಲ್ಲಿ ಸತ್ಯತೆಯನ್ನು ಸರಕಾರ ಕಾಣಲಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

ಚೀನವನ್ನು ಮಟ್ಟಹಾಕಬೇಕು
ಚಳವಳಿ

ವಾಷಿಂಗ್ಟನ್—ಎಂಡನೇ ವಿಶ್ವ ಸಮರಕ್ಕೆ ಮೊದಲು ಮಾಸ್ಕೂರಿಯಾದಲ್ಲಿ ಜಪಾನೀ ಆಕ್ರಮಣ, ಆಟಲಿಯವರ ಇಥೋಪಿಯಾದ ಮೇಲಿನ ಧಾಳಿ, ಬಿಕೋಸ್ಲೊವಾಕಿಯ ಮತ್ತು ಆಸ್ಟ್ರಿಯಾ ನೆಂಗದ್ದನಂತರ ರೈಂಲ್ಯಾಂಡಿನ ಮೇಲೆ ಹಿಟ್ಲರು ನಡೆಸಿದಂತಿದೆ ವಿಯಟ್ನಾಮಿನ ಪರಿಸ್ಥಿತಿ ಎಂದು ಹೇಳಲಾಗುತ್ತಿದೆ — ಚೀನವನ್ನು ಮಟ್ಟಹಾಕಬೇಕೆಂಬ ಜಳವಳಿ ಹುಟ್ಟಿದೆ — ವಿಯಟ್ನಾಂ ಯುದ್ಧದಲ್ಲಿ ಚೀನಾದ ಕತ್ಸವೇನಾದೂ ನಡೆದರೆ ಕಮ್ಯುನಿಸ್ಟ್ ಪ್ರಪಂಚವು ಚೀನದ ಜೊತೆ ಸೇರಿ, ಶಾಂತಿಯುತ ಸಹಬಾಳ್ವೆ ಸಿನಿರ್ನಾಮವಾಗುವುದು ಎಂದು ಅಮೇರಿಕಾ ಅಧಿಕಾರಿಗಳು ಹೇಳುತ್ತಿರುವರು

ಬಸ್ ಚಾರ್ಜು ಹೆಚ್ಚಳ

ಬೆಂಗಳೂರು— ಬೆಂಗಳೂರು ಟ್ರಾನ್ಸ್ಪೋರ್ಟು ಕರ್ಪೊರೇಷನ್ ಹೀರಿ ಸರಕಾರಿ ಬಸ್‌ಗಳ ಚಾರ್ಜು ಹೆಚ್ಚಬಹುದೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು

ಅಮೆರಿಕ ಅಧ್ಯಕ್ಷರ ಆಳಿಕೆಗೆ ಅನಮ್ಮತಿ

ನವದೆಹಲಿ— ಕೇರಳದಲ್ಲಿ ಸ್ವಸಂರೀತಿಮಂಡಲವನ್ನು ಅಬಾರ್ಯ ರಂಗಾ ಸಲಹೆ ಮಾಡಿದರು ; ಎಲ್ಲ ಪಕ್ಷಗಳ ಪ್ರತಿನಿಧಿಗರುವುದು — ಕೇರಳದ ಒಡ್ಡಿಟ್ ವಿಷಯ ಮಾತನಾಡುತ್ತಾ, ರಂಗರವರೂ ಮತ್ತು ಕಮ್ಯೂನಿಸ್ಟು ವಾರಿಯರೂ ಕೇರಳದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಪ್ರಾರಂಭವಾಗಿ ಒಂದು ವರ್ಷದ ಅವಧಿಯಲ್ಲಿ ಸ್ವಯಂ ನಿರ್ಧಾರ ವಿಂಬೇಕೆಂಬ ನನ್ನ ನಿಲುವಿಗೆ ಬೆಂಬಲಿಸಿರುವರೆಂದೂ ಹೇಳಿದರು.

★

ಷೇಕ್ ಅಬ್ದುಲ್ಲರ ಹೇಳಿಕೆ

ಲಂಡನ್— ಇಲ್ಲಿ ವಾಸಿಸುತ್ತಿರುವ ಕೆಲವು ಮಂದಿ ಕಾಶ್ಮೀರಿಗಳು ಕೊಟ್ಟ ಸನ್ಮಾನಪತ್ರಕ್ಕೆ ಉತ್ತರಕೊಡುತ್ತಾ ಷೇಕ್ ಅಬ್ದುಲ್ಲಾರವರು ನಾನು ಭಾರತದ ವಿರುದ್ಧ ನನ್ನ ಪ್ರವಾಸದಲ್ಲಿ ಪ್ರಚಾರ ಮಾಡುತ್ತಿರುವುದಾಗಿ ಕೆಲವು ಪತ್ರಿಕೆಗಳು ವಾದ ಮಾಡಿವೆ — ನಾನು ಯಾರ ವಿರುದ್ಧವಾಗಿ, ಅದರಲ್ಲೂ ನನ್ನ ನೆಲೆಯುವ ವಿರುದ್ಧವಾಗಿ, ಅಪಪ್ರಚಾರ ಮಾಡುತ್ತಿಲ್ಲ — ನಾನು ಭಾರತದ ಅನೇಕ ನಾಯಕರೊಡನೆ ಮಾತುಕತೆ ನಡೆಸಿದ್ದೇನೆ : ಶ್ರೀ ರಾಜಗೋಪಾಲಾಚಾರ್ಯರು ಮತ್ತು ಜಯಪ್ರಕಾಶ ನಾರಾಯಣರು, ಕಾಶ್ಮೀರದಲ್ಲಿ ಸ್ವಯಂ ನಿರ್ಧಾರ ವಿರಬೇಕೆಂಬ ನನ್ನ ನಿಲುವಿಗೆ ಬೆಂಬಲಿಸಿರುವರೆಂದೂ ಹೇಳಿದರು.

ಹೊಸ ರೀತಿಯ ಔಷಧ

ಸ್ಯಾನಿಗಳ ಹಿತದ ಸುದ್ದಿ — ರೈತರಿಗೆ ತುಂಬಾ ನಷ್ಟ ಕಡಿಸುವ, ಪ್ರಾಣಿಗಳ ಶೋಗಗಳನ್ನು ನಿವಾರಿಸುವ ಎಂಥ ದುದ್ದನ್ನು ಪ್ರಿಟೀಷ್ ವಿಜ್ಞಾನಿಗಳು ಕಂಡು ಹಿಡಿದಿರುವರು

ಮನು ಸಂಹಿತೆಯನ್ನು ಯಾರು ಅಗೌರಿಸಿದರು ? ಮತ್ತು ಏಕೆ ?

★

(ಮುಂದುವರಿದುದು)

ಕೆಲವಾರು ಅಥವಾ ನೂರಾರು ವಿದ್ಯಾರ್ಥಿಗಳು ಒಂದೇ ತರಗತಿಯಲ್ಲಿರುವುದನ್ನು ಶಾಲೆಗಳಲ್ಲಿ ಅಥವಾ ವಿಶ್ವವಿದ್ಯಾನಿಲಯಗಳಲ್ಲಿ ನಾವು ಕಾಣುತ್ತೇವೆ ; ಅವರುಗಳಲ್ಲಿ ಮೂರು ರೀತಿಯ ವಿದ್ಯಾರ್ಥಿಗಳಿರುವುದನ್ನು ನಾವು ಗಮನಿಸುತ್ತೇವೆ : ಎಲ್ಲಿಯೋ ವಿರಳ ಕೆಲವು ವಿದ್ಯಾರ್ಥಿಗಳು ಪಾಠವನ್ನು ತಮ್ಮ ವಿಶ್ಲೇಷಣಾತ್ಮಕ ಬುದ್ಧಿಶಕ್ತಿಯಿಂದ ಉಪಾಧ್ಯಾಯರು ಹೇಳಿದ ವಿಷಯಗಳನ್ನೆಲ್ಲವನ್ನೂ ಪೂರ್ತಿ ಗ್ರಹಿಸುತ್ತಾರೆ, ಹಾಗೂ ಅವರು ಹೇಳದೇ ಬಿಟ್ಟ ಕೆಲವು ವಿಚಾರಗಳನ್ನೂ ತಿಳಿಯುತ್ತಾರೆ ; ಬಹು ಮಂದಿ ವಿದ್ಯಾರ್ಥಿಗಳು ಬೋಧನೆಯನ್ನು ಪೂರ್ತಿ ಪಾಠವನ್ನು ಅಲ್ಲದಿದ್ದರೂ ಬಹು ಭಾಗವನ್ನು ಅರ್ಥಮಾಡಿಕೊಳ್ಳುತ್ತಾರೆ ; ಅಷ್ಟೇ ಹೊರತು ಉಪಾಧ್ಯಾಯರು ಹೇಳಬೇಕೆಂದು ಚಿಂತಿಸುವಷ್ಟು ಬುದ್ಧಿಶಕ್ತಿ ಇರುವುದಿಲ್ಲ : ಇವೆಂಡಕ್ಕಿಂತ ಬೇರೆ ರೀತಿಯ ವಿದ್ಯಾರ್ಥಿಗಳು ಮೂರನೇ ರೀತಿಯವರಾಗಿದ್ದಾರೆ ; ಅವರ ಸಂಖ್ಯೆ ಮೊದಲನೇ ರೀತಿಯವರಿಗಿಂತ ಬಹಳ ಹೆಚ್ಚಾಗಿರುತ್ತೆ, ಎಂಡನೆಯವರಿಗಿಂತ ಕಡಮೆ ಇರುತ್ತೆ : ಈ ಮೂರನೇ ರೀತಿಯ ವಿದ್ಯಾರ್ಥಿಗಳು ಯಾವಾಗಲೂ ತರಗತಿಯಲ್ಲಿ ಪಾಠಕ್ಕೆ ಗಮನ ಕೊಡುವುದಿಲ್ಲವು : ಅವರು ಅಧ್ಯಾಪಕರ ಪೂರ್ಣ ಬೋಧನೆಯನ್ನು ಕೇಳಿದರೂ ಸಹ ಅವರಲ್ಲಿ ಸ್ವಲ್ಪವನ್ನೂ ಕೂಡ ಅರ್ಥ ಮಾಡಿಕೊಳ್ಳಲಾರರು : ಇಂಥಾ ವಿದ್ಯಾರ್ಥಿಗಳಿಗೆ ಅಕ್ಕುತ್ತಮ ರೀತಿಯಲ್ಲಿ ಶುಭಾ ಮೇಘನವಾಗಿರುವ ಅಧ್ಯಾಪಕರು ಬೋಧಿಸಿದರೂ ಕೂಡ ಅದು ಇವರಿಗೆ ಪ್ರಯೋಜನವಿಲ್ಲದ ಉಪದೇಶವಾಗುತ್ತದೆ : ಹಿಂದುಗಳಿಗೆ ಪವಿತ್ರ ಶಾಸನವನ್ನು ರಚಿಸಿದ ಮನುವು ಅಕ್ಕುತ್ತಮ ರೀತಿಯ ಅಧ್ಯಾಪಕನಾಗಿದ್ದಾನೆ ! ಆದರೆ ದುರ್ದೈವವಶಾತ್ ಈಗಿನ ಕಾಲದ ಮೂರನೇ ರೀತಿಯ ವಿದ್ಯಾರ್ಥಿಗಳಿಗೆ ಬುದ್ಧಿಶಕ್ತಿಯು ಅಜ್ಞಾನವಿಂದಾಗಿ, ಅಕ್ಕುತ್ತಮ ರೀತಿಯ ಅಮೂಲ್ಯವಾದ ಮನುವಿನ ಶಾಸನಗಳು ಅರ್ಥವಾಗದಂತಾಗಿದೆ. [ಸಶೇಷ

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಪ್ರೊ|| ರವೀಂದ್ರಕುಮಾರ್ ಸಿದ್ಧಾಂತಶಾಸ್ತ್ರಿ, ಎಂ ಎ, ಎಫ್ ಆರ್ ಎಸ್ ರವರ ಲೇಖನದಿಂದ ಸಂಗ್ರಹಿಸಿದ್ದು

ಅ. ನ. ಅಯ್ಯಂಗಾರ್

Oldest Newspaper in the State] — [Golden Jubilee 1966

Sri 'SATYAVADI' Daily

Chamarajapuram, Mysore 4



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ ಜನಪ್ರಿಯತೆ 2 ನೇ ವಾರ

ಶಿ ನಿ

ಬಿಡುಲ್ ರಾಮಣ್ಣರವರ — ಮನೋಹರ ಹಿಂದಿ ಚಿತ್ರ

ಬೆನೆಜ್ಜೀರ್ BENAZIR

ಪಾತ್ರ– ಅಶೋಕಕುಮಾರ್, ವೈಜಯಂತಿಮಾಲಾ, ಶಶಿಕಪೂರ್, ನಿರೂಪರಾಯ್ ಕಲರ್

ಪ್ರತಿದಿನ 3 ಪ್ರದರ್ಶನಗಳು

ಆಪೆರಾ — ಜಯಪ್ರದ 3 ನೇ ವಾರ

ನಾಗಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI

SUDHA

A Superb Tonic

Help The Gorakshana

"ಗೋರಕ್ಷಣ"ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ್ ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆಶೀರ್ವಾದ ಅನುಗ್ರಹ ಕೃಪೆಯುಳ್ಳದಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ "ಗೋರಕ್ಷಣ"ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ಪಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M S Krishna Rao
the Satyavadi Press Camarajapuram Mysore 4